All India Radio: Bangalore

National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

14.01.2026 19.35 p.m.

*****************

ಮುಖ್ಯಾಂಶಗಳು

- ಪರಿಸರ ಸ್ನೇಹಿ ಸುಸ್ಥಿರ ಕೃಷಿ ಕೈಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಕರೆ
- ಇರಾನ್‌ನಲ್ಲಿರುವ ಭಾರತೀಯರು ಅಲ್ಲಿಂದ ತಕ್ಷಣ ಹೊರಡುವಂತೆ ಭಾರತದ ಸೂಚನೆ
- ಭಯೋತ್ಪಾದನೆ ನಿರ್ಮೂಲನೆ ಕುರಿತ ಆಸಿಯಾನ್ ರಕ್ಷಣಾ ಸಚಿವರು ಹಾಗೂ ತಜ್ಞರ ಸಭೆ ಆರಂಭ
- ರಾಷ್ಟ್ರೀಯ ಹೆದ್ದಾರಿ ಬಳಕೆದಾರರಿಗೆ ನೈಜ ವೇಳೆಯ ಸುರಕ್ಷತಾ ಎಚ್ಚರಿಕೆ ನೀಡುವ ಪ್ರಾಯೋಗಿಕ ಉಪಕ್ರಮಕ್ಕೆ ಚಾಲನೆ
- ರಾಜ್‌ಕೋಟ್ ಎರಡನೇ ಏಕದಿನ ಕ್ರಿಕೆಟ್; ಗೆಲ್ಲಲು ನ್ಯೂಜಿಲೆಂಡ್‌ಗೆ ೨೮೫ ರನ್‌ಗಳ ಗುರಿ ನೀಡಿದ ಭಾರತ

*****************

ಪರಿಸರ ಸ್ನೇಹಿ ಸುಸ್ಥಿರ ಕೃಷಿ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಅವರು ನವದೆಹಲಿಯಲ್ಲಿಂದು ಪೊಂಗಲ್ ಆಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಸಹಭಾಗಿಗಳಾದ ರೈತರನ್ನು ಸಶಕ್ತಗೊಳಿಸಲು ಕೇಂದ್ರ ಸರ್ಕಾರ ಶ್ರಮಿಸುತ್ತಿದೆ.

ಮಣ್ಣು ಸಂರಕ್ಷಣೆ, ನೀರು ಉಳಿತಾಯ ಹಾಗೂ ಸಂಪನ್ಮೂಲಗಳ ಸದ್ಬಳಕೆ ಸರ್ಕಾರಿ ಜಾರಿಗೊಳಿಸುತ್ತಿರುವ ವಿವಿಧ ಕಾರ್ಯಕ್ರಮಗಳ ಉದ್ದೇಶವಾಗಿದೆ. ನಮ್ಮ ಊಟದ ತಟ್ಟೆ ಹಾಗೂ ಹಣಕಾಸು ಸ್ಥಿತಿ ಉತ್ತಮಗೊಳ್ಳುವ ಜೊತೆಗೆ ಭೂಮಿ ಸಂರಕ್ಷಣೆಯು ಮಹತ್ವದ ವಿಷಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಧ್ವನಿ: ಪ್ರಧಾನಿ

ಸುಸ್ಥಿರ ಕೃಷಿ ಹಾಗೂ ನೀರಿನ ಸದ್ಬಳಕೆ ಕುರಿತಂತೆ ಕರ್ನಾಟಕದ ರೈತರಾದ ಕುಮಾರಸ್ವಾಮಿ ಆಕಾಶವಾಣಿಯೊಂದಿಗೆ ತಮ್ಮ ಅನಿಸಿಕೆಯನ್ನು ಈ ರೀತಿ ಹಂಚಿಕೊಂಡಿದ್ದಾರೆ.

ಧ್ವನಿ: ಕುಮಾರಸ್ವಾಮಿ

*****************

ರಾಷ್ಟ್ರಪತಿ ದ್ರೌಪದಿ ಮುರ್ಮು ನಾಳೆಯಿಂದ ಎರಡು ದಿನಗಳ ಕಾಲ ಪಂಜಾಬ್‌ಗೆ ಭೇಟಿ ನೀಡಲಿದ್ದಾರೆ. ಅಮೃತಸರದಲ್ಲಿರುವ ಗುರುನಾನಕ್ ದೇವ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಸಂದರ್ಭದ ಘಟಿಕೋತ್ಸವದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

*****************

ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ಸಂವಿದಾನ ಸದನದ ಐತಿಹಾಸಿಕ ಸೆಂಟ್ರಲ್ ಹಾಲ್‌ನಲ್ಲಿ ೨೮ನೇ ಕಾಮನ್‌ವೆಲ್ತ್ ಸ್ಪೀಕರ್‌ಗಳು ಮತ್ತು ಪೀಠಾಸೀನಾಧಿಕಾರಿಗಳ ಸಮ್ಮೇಳನ - ಸಿಎಸ್‌ಪಿಒಸಿ ಅನ್ನು ಉದ್ಘಾಟಿಸಲಿದ್ದಾರೆ.

೪೨ ಕಾಮನ್‌ವೆಲ್ತ್ ರಾಷ್ಟ್ರಗಳು ಮತ್ತು ನಾಲ್ಕು ಅರೆ-ಸ್ವಾಯತ್ತ ಸಂಸತ್ತುಗಳ ೬೧ ಸ್ಪೀಕರ್‌ಗಳು ಹಾಗೂ ಪೀಠಾಸೀನಾಧಿಕಾರಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಂಸದೀಯ ಪ್ರಜಾಪ್ರಭುತ್ವದ ಕುರಿತು ಜ್ಞಾನ ಮತ್ತು ತಿಳಿವಳಿಕೆಯನ್ನು ಉತ್ತೇಜಿಸುವುದು ಹಾಗೂ ಸಂಸದೀಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಈ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ.

*****************

ಇರಾನ್‌ನಲ್ಲಿರುವ ಭಾರತೀಯರು ವಾಣಿಜ್ಯ ವಿಮಾನ ಸೇರಿದಂತೆ ಯಾವುದೇ ಸಾರಿಗೆ ಬಳಸಿ ಅಲ್ಲಿಂದ ತಕ್ಷಣ ಹೊರಡುವಂತೆ ಭಾರತ ಸೂಚಿಸಿದೆ.

ಈಗಾಗಲೇ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮುಂದಿನ ಸೂಚನೆ ನೀಡುವವರೆಗೆ ಭಾರತೀಯರು ಇರಾನ್‌ಗೆ ಪ್ರಯಾಣ ಮಾಡಬಾರದು ಎಂದು ಸಲಹೆ ನೀಡಿದೆ.

ಇದಕ್ಕಾಗಿ ಸಹಾಯವಾಣಿ ಸಂಖ್ಯೆ ಪ್ಲಸ್ ೯೮೯೧೨೮೧೦೯೧೧೫, ಪ್ಲಸ್ ೯೮೯೧೨೮೧೦೯೧೦೯, ಪ್ಲಸ್ ೯೮೯೧೨೮೧೦೯೧೦೨, ಪ್ಲಸ್ ೯೮೯೯೩೨೧೭೯೩೫೯ ಸಂಪರ್ಕಿಸಬಹುದಾಗಿದೆ.

*****************

ಭಾರತ್ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಮುಂದಿನ ತಿಂಗಳು ಪ್ರತಿಷ್ಠಿತ ಕೃತಕ ಬುದ್ಧಿಮತ್ತೆ ಶೃಂಗಸಭೆ ಆಯೋಜಿಸಲಿದೆ. ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಐಐಟಿ ಮದ್ರಾಸ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ವಿಷಯ ಪ್ರಕಟಿಸಿದ್ದಾರೆ.

ಶಿಕ್ಷಣ, ಆರೋಗ್ಯ ಮತ್ತು ತಯಾರಿಕಾ ರಂಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಕೃತಕಬುದ್ಧಿಮತ್ತೆಯ ಅಳವಡಿಕೆ ತೀವ್ರವಾಗಿ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ಮುಂಬರುವ ಶೃಂಗಸಭೆ, ಕೃತಕಬುದ್ಧಿಮತ್ತೆ ಆವಿಷ್ಕಾರ ಮತ್ತು ಅನ್ವಯಿಕಗಳಲ್ಲಿ ಭಾರತದ ಪಾತ್ರವನ್ನು ಬಲಪಡಿಸುವ ವೇದಿಕೆಯಾಗಲಿದೆ ಎಂದು ಸಚಿವ ಪ್ರಧಾನ್ ಸುದ್ದಿಗಾರರಿಗೆ ತಿಳಿಸಿದರು.

ಎಲ್ಲ ಭಾರತೀಯ ಶಿಕ್ಷಣ ಸಂಸ್ಥೆಗಳಲ್ಲಿ ಶಾಲಾ ಮಟ್ಟದ ಶಿಕ್ಷಣದಿಂದ ಮುಂದುವರೆದ ಸಂಶೋಧನೆವರೆಗಿನ ಎಲ್ಲ ಹಂತಗಳಲ್ಲಿ ಮಾತೃಭಾಷೆ, ಶಿಕ್ಷಣದ ಮಾಧ್ಯಮವಾಗಿ ಆದ್ಯತೆ ಪಡೆಯಲಿದೆ ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು.

ಐಐಟಿ ಮದ್ರಾಸ್ ಸಂಸ್ಥೆಯಲ್ಲಿ ಶೃಂಗಸಭೆಗಾಗಿ ನಡೆದಿರುವ ಸಿದ್ಧತೆ ಪ್ರಗತಿ ಪರಿಶೀಲಿಸಿದ ಸಚಿವರು, ಪೊಂಗಲ್ ಆಚರಣೆಯಲ್ಲಿ ಪಾಲ್ಗೊಂಡರು.

*****************

ಭಯೋತ್ಪಾದನೆ ನಿರ್ಮೂಲನೆ ಕುರಿತಾದ ೧೬ನೇ ಆಸಿಯಾನ್ ರಕ್ಷಣಾ ಸಚಿವರು ಹಾಗೂ ತಜ್ಞರ ಕಾರ್ಯಕಾರಿ ತಂಡದ ಸಭೆ ನವದೆಹಲಿಯಲ್ಲಿ ಇಂದು ಆರಂಭವಾಯಿತು.

ಮೂರು ದಿನಗಳ ಈ ಸಭೆ ಭಾರತ ಮತ್ತು ಮಲೇಷಿಯಾ ಸಹ ಅಧ್ಯಕ್ಷತೆಯಲ್ಲಿ ನಡೆದಿದೆ. ಬ್ರೂನೈ, ಕಾಂಬೋಡಿಯಾ, ಇಂಡೋನೇಷಿಯಾ, ಲಾವೋ ಪಿಡಿಆರ್, ಮಲೇಷಿಯಾ, ಮ್ಯಾನ್ಮಾರ್, ಫಿಲಿಪ್ಪೈನ್ಸ್, ವಿಯೆಟ್ನಾಂ, ಸಿಂಗಾಪೂರ್, ಥೈಲ್ಯಾಂಡ್ ಮತ್ತು ತಿಮೋರ್ ಮೊದಲಾದ ೧೧ ದೇಶಗಳ ಕಾರ್ಯದರ್ಶಿ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ. ಇದಲ್ಲದೇ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ದಕ್ಷಿಣ ಕೊರಿಯಾ, ಜಪಾನ್, ಚೀನಾ, ಅಮೆರಿಕಾ ಮತ್ತು ರಷ್ಯಾ ಸೇರಿದಂತೆ ಏಳು ದೇಶಗಳ ಸಂವಾದ ಸಹ ಭಾಗಿಗಳ ಉಪಸ್ಥಿತಿಯಲ್ಲಿ ಸಭೆ ನಡೆದಿದೆ.

ಭಯೋತ್ಪಾದನೆ ನಿಗ್ರಹ ಕುರಿತಂತೆ ಭಾರತದ ಬಹುಪಕ್ಷೀಯ ಸಹಕಾರ ಬಲಪಡಿಸುವುದು ಈ ವೇದಿಕೆಯ ಉದ್ದೇಶವಾಗಿದೆ. ಈ ಬಗ್ಗೆ ಮೂರು ವರ್ಷಗಳ ಕಾರ್ಯ ಯೋಜನೆಯ ಚಟುವಟಿಕೆ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುತ್ತಿದೆ. ಸಭೆಯಲ್ಲಿ ಪ್ರಾಸ್ತವಿಕವಾಗಿ ಮಾತನಾಡಿದ ಭಾರತದ ರಕ್ಷಣಾ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಮಿತಾಬ್ ಪ್ರಸಾದ್, ಶಾಂತಿ ಮತ್ತು ಸಮೃದ್ಧಿಗಾಗಿ, ಭಯೋತ್ಪಾದಕತೆ ವಿರುದ್ಧ ಎಲ್ಲರೂ ಒಗ್ಗೂಡಿ ಹೋರಾಟ ಮಾಡುವ ಅವಶ್ಯಕತೆ ಇದೆ ಎಂದರು.

ಸಭೆಯಲ್ಲಿ ಪ್ರತಿನಿಧಿಗಳು ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆ ಗುಪ್ತಚರ ಚೌಕಟ್ಟು, ತರಬೇತಿ ಹಾಗೂ ಸಾಮರ್ಥ್ಯ ನಿರ್ಮಾಣ ಉಪಕ್ರಮ ಕುರಿತಾದ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

*****************

ರಾಷ್ಟ್ರೀಯ ಹೆದ್ದಾರಿ ಬಳಕೆದಾರರಿಗೆ ನೈಜ ವೇಳೆಯ ಸುರಕ್ಷತಾ ಎಚ್ಚರಿಕೆ ನೀಡುವ ಪ್ರಾಯೋಗಿಕ ಉಪಕ್ರಮವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆರಂಭಿಸಿದೆ.

ಹೆದ್ದಾರಿಗಳಲ್ಲಿ ಅದರಲ್ಲೂ ವಿಶೇಷವಾಗಿ ಮಂಜು ಕವಿದ ಸಂದರ್ಭಗಳಲ್ಲಿ ಸಾಕು ಪ್ರಾಣಿಗಳ ಚಲನೆ ಹಾಗೂ ಇತರ ಅಂಶಗಳಿಂದ ಉಂಟಾಗಬಹುದಾದ ಅಪಘಾತಗಳನ್ನು ಕಡಿಮೆ ಮಾಡುವುದು ಈ ಉಪಕ್ರಮದ ಉದ್ದೇಶವಾಗಿದೆ.

ಜೈಪುರ-ಅಗ್ರ ಹಾಗೂ ಜೈಪುರ-ರಿವಾರಿ ರಾಷ್ಟ್ರೀಯ ಹೆದ್ದಾರಿ ಕಾರಿಡಾರ್‌ಗಳಲ್ಲಿ ಈ ಉಪಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಇದರನ್ವಯ ಗುರುತಿಸಲಾದ ಸಂಭವನೀಯ ಅಪಾಯದ ವಲಯಗಳಲ್ಲಿ ಸುಮಾರು ೧೦ ಕಿಲೋಮೀಟರ್ ಮೊದಲೆ ಎಚ್ಚರಿಕೆ ನೀಡುವುದು ಈ ಯೋಜನೆಯ ಪ್ರಮುಖ ಅಂಶವಾಗಿದೆ.

*****************

ಹಿರಿಯ ಸೇನಾನಿಗಳು ರಾಷ್ಟ್ರಪ್ರಜ್ಞೆ ಹಾಗೂ ಶೌರ್ಯಗಳ ಸಜೀವ ಸ್ತಂಭಗಳಾಗಿದ್ದು, ಮುಂದಿನ ತಲೆಮಾರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಸಶಸ್ತ್ರ ಪಡೆಯ ಹಿರಿಯರ ದಿನಾಚರಣೆ ಅಂಗವಾಗಿ ನವದೆಹಲಿಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ರಾಜನಾಥ್ ಸಿಂಗ್, ಶಿಸ್ತು, ನಾಯಕತ್ವ, ಧೈರ್ಯ ಮೊದಲಾದ ಗುಣಗಳಿಂದ ಹಿರಿಯ ಸೇನಾನಿಗಳು ಸಮಾಜ ಮತ್ತು ರಾಷ್ಟ್ರ ನಿರ್ಮಾಣದ ಪ್ರತಿ ಹಂತದಲ್ಲಿ ಕೊಡುಗೆ ನೀಡುತ್ತಿದ್ದಾರೆ ಎಂದರು.

*****************

ಅರಾವಳಿ ವಲಯದ ಪರಿಸರ ಸಂರಕ್ಷಣೆಗೆ ಸರ್ಕಾರ ಬದ್ಧವಿದೆ ಎಂದು ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಖಾತೆ ಸಚಿವ ಭೂಪೇಂದರ್ ಯಾದವ್ ಹೇಳಿದ್ದಾರೆ.

ಅವರು ನವದೆಹಲಿಯಲ್ಲಿ ಇಂದು ಅರಾವಳಿ ಭೂ ವಲಯದ ಪರಿಸರ ಪುನರ್ ಸ್ಥಾಪನೆ ಕುರಿತಂತೆ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡುತ್ತಿದ್ದರು.

ಅಕ್ರಮ ಒತ್ತುವರಿ ಹಾಗೂ ಗಣಿಗಾರಿಕೆ ತಡೆಗಟ್ಟಲು ಅರಾವಳಿ ಭಾಗದ ಸುಮಾರು ೯೭ ಕಿಲೋಮೀಟರ್ ಕಂದಾಯ ಭೂಮಿಯನ್ನು ಶಾಶ್ವತ ಸಂರಕ್ಷಿತ ಅರಣ್ಯ ಪ್ರದೇಶ ಎಂದು ಘೋಷಿಸಲಾಗಿದೆ ಎಂದು ತಿಳಿಸಿದರು.

*****************

ಭಾರತೀಯ ಸೇನಾಪಡೆಯ ಐಎನ್ಎಸ್ವಿ ಕೌಂಡಿನ್ಯಾ ಪರಂಪರಾ ಹಡಗು ಮಸ್ಕತ್ತಿನ ಪೋರ್ಟ್ ಸುಲ್ತಾನ್ ಕಾಬೂಸ್ ತಲುಪಿದೆ. ಈ ಹಡಗು ಗುಜರಾತ್‌ನ ಪೋರ್‌ಬಂದರ್‌ನಿಂದ ಕಳೆದ ತಿಂಗಳು ೨೯ ರಂದು ಪ್ರಯಾಣ ಆರಂಭಿಸಿತ್ತು.

*****************

ನವಿ ಮುಂಬೈನ ಡಾ.ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿಂದು ಯುಪಿ ವಾರಿಯರ್ಸ್ ಮತ್ತು ಡೆಲ್ಲಿಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಿವೆ.

ಟಾಸ್ ಗೆದ್ದ ಡೆಲ್ಲಿಕ್ಯಾಪಿಟಲ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

*****************

ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ಎರಡನೇ ಏಕದಿನ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ನಿಗದಿತ ೫೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೨೮೪ ರನ್ ಗಳಿಸಿದೆ. ಕೆ.ಎಲ್.ರಾಹುಲ್ ೯೨ ಬಾಲ್‌ಗಳಲ್ಲಿ ಅಜೇಯ ೧೧೨ ರನ್ ಗಳಿಸಿದರು.

ಗೆಲ್ಲಲು ೨೮೫ ರನ್‌ಗಳ ಗುರಿ ಬೆನ್ನತ್ತಿರುವ ನ್ಯೂಜಿಲೆಂಡ್ ಇತ್ತೀಚಿನ ವರದಿ ಬಂದಾಗ ೨೩.೫ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೧೧೨ ರನ್ ಗಳಿಸಿ ಆಡುತ್ತಿದೆ.

********ಮುಕ್ತಾಯ*********